ಶ್ರೀ ಸಂಪಾದನ ಶಾಖೆ

III ಶಾಖಾ ಸಂಪಾದನೆ

28

ಶಿವಯೋಗಾಚರಣೆ

236
2711

ಶಿವಾನುಭವ ಗ್ರಂಥಮಾಲಾ ನಂ|| ೮

594

# ಶಿವಯೋಗಾಚರಣೆ.

ಸಂಪಾದಕರು.
ರಾ|| ಸಾ|| ಫ. ಗು. ಹಳಕಟ್ಟಿ
ಬಿ. ಏ. ಎಲ್ ಎಲ್. ಬಿ. ವಕೀಲ.

ವಿಜಾಪುರ
೧೯೨೬

ಬೆಲೆ. ೧ ಆಣೆ

594

# ಶಿವಯೋಗಾಚರಣೆ.

ಆದಿ ಶ್ರೀಪರಶಿವನ- ಪಾದವನು ಮರೆದು ಮನ।
ಹೋದ ಪರಿಯಲ್ಲಿ ನಡೆದು ನುಡಿದಾಡುವ।
ಕ್ರೋಧಿಗೆಲ್ಲಿಯದು ಶಿವಯೋಗ ॥೧॥
ಲಿಂಗಪೂಜೆಯನೊಲ್ಲ- ದಂಗ ಶೃಂಗರದೊಳಗೆ।
ಹಿಂಗದೆ ಹೊತ್ತುಗಳೆದು ಲಿಂಗವ ಮರೆದ।
ಭಂಗಗೆಲ್ಲಿಯದೋ ಶಿವಯೋಗ ॥೨॥
ಗಡ್ಡ ಮಂಡೆಯ ಬೆಳಿಸಿ-ದೊಡ್ಡ ಪಾಗುವಸುತ್ತಿ।
ಅಡ್ಡ ನೆರೆತೋರೆ ಧರಣಿಯೊಳು ತಿರಿದುಂಬ।
ಹೆಡ್ಡಗೆಲ್ಲಿಯದೊ ಶಿವಯೋಗ ॥೩॥
ಮಂಡೆಯ ಬೋಳಿಸಿಕೊಂಡು-ಕಂಡಕಂಡಲಿ ತಿರಿಮುಂಡು॥
ಕಂಡಕಂಡವರ ಜರಿದು ಅಂಜಿಸಿಕೊಂಬ।
ಭಂಡಗೆಲ್ಲಿಯದೊ ಶಿವಯೋಗ ॥೪॥
ಒರಿಸಿ ದುರ್ಲಿಪಿಯ ತನು-ಕರದೊಳಿಷ್ಟವ ಕೊಟ್ಟ॥
ಪರಮ ಶ್ರೀಗುರುವ ನರನೆಂದು ಭಾವಿಸುವ।
ನರಕಿಗೆಲ್ಲಿಯದೊ ಶಿವಯೋಗ ॥೫॥
ತನ್ನೊಳಗೆ ಮಾಯೆ ಸಂ-ಪೂರ್ಣವಾಗಿರುತಿದ್ದು೯।
ಮನ್ನೆಯರ ಮೇಲೆ ಮಾಯಿಕವ ಕಲ್ಪಿಪ।
ಕುನ್ನಿಗೆಲ್ಲಿಯದೊ ಶಿವಯೋಗ ॥೬॥
ಏಣಾಂಕಧರ ತನ್ನ-ಪ್ರಾಣವೆಂದು ತಿಳಿಯದೆ।
ಪ್ರಾಣವೇ ಹೇಮ ಕಾಮಿನಿಯರೆಂದೆಂಬ।
ಕೋಣಗೆಲ್ಲಿಯದೊ ಶಿವಯೋಗ ॥೭॥
ಇಷ್ಟಲಿಂಗವ ಗಳದಿ-ಕಟ್ಟಿಕೊಂಡಿರುತಿದ್ದು೯
ಸೃಷ್ಟಿಯೊಳಗಿರುವ ಪರದೈವಕೆರಗುವ।

ಭ್ರಷ್ಟಗೆಲ್ಲಿಯದೊ ಶಿವಯೋಗ ॥೮॥
ಕೊಡುವವರ ಹೊಗಳುತ್ತ - ಕೊಡದವರ ಬೊಗಳುತ್ತ॥
ಪೊಡವಿಯೊಳು ಶ್ರೇಷ್ಠ ಒಡೆಯರೆಂದೆನಿಸುವ।
ಹುಡುಗಗೆಲ್ಲಿಯದೊ ಶಿವಯೋಗ ॥೯॥

ಅನ್ನ ವಸ್ತ್ರಂಗಳಿಗೆ-ಅನ್ಯರನು ಬೋಧಿಸುತ।
ತನ್ನದುರ್ಘಟವ ಸಂತವಿಡು ತಿರುತಿಹ।
ಚುನ್ನಗೆಲ್ಲಿಯದೊ ಶಿವಯೋಗ ॥೧೦॥

ಒಡೆಯರಿಹ ಮನೆಯಮುಂ-ಗಡೆಗೆ ಭಿಕ್ಷಾಯೆನಲು।
ಮುಡಿವಾಗಿ ನೋಡಿ ಭೂತಹೊಡೆದಂತಿರುವ।
ಬಡುಕಗೆಲ್ಲಿಯದೊ ಶಿವಯೋಗ ॥೧೧॥

ಬೆಚ್ಚಾದೆ ಬೆದರಾದೆ-ನೀಚಮಾನಿನಿಯರಾ।
ಉಚ್ಚೆಯಾ ಬಚ್ಚಲೊಳು ಬಿದ್ದು ಹೊರಳುವ।
ಹುಚ್ಚಗೆಲ್ಲಿಯದೊ ಶಿವಯೋಗ ॥೧೨॥

ಜಡೆಯ ಮುಡಿಯನೆ ತಾಳ್ದು-ಮಡದಿಯರ ಕಾಲಡಿಯ।
ಬುಡಬುಡನೆ ಹೊರಳಿ ಕಪಿಯಾಟವಾಡುವ।
ಜಡಗೆಲ್ಲಿಯದೊ ಶಿವಯೋಗ ॥೧೩॥

ಎಲ್ಲ ಶಬ್ದಂಗಳನು-ಬಲ್ಲೆನೆಂದೆನುತಲಿ।
ಎಲ್ಲರ ನುಡಿಯ ಕಟ್ಟಿ ತನ್ನೊಳು ಮೆರೆವ।
ಖುಲ್ಲಗೆಲ್ಲಿಯದೊ ಶಿವಯೋಗ ॥೧೪॥

ಮಾಹೇಶ್ವರರ ಮುಂದೆ-ತಾ ಹಿಡಿದ ವ್ರತವನ್ನು।
ವಾಹಿಯಲಿ ಬಿಟ್ಟು ತನ್ನಸುವ ಹೊರೆವ ಸಂ।
ದೇಹಿಗೆಲ್ಲಿಯದೊ ಶಿವಯೋಗ ॥೧೫॥

ತಿಮ್ಮ ಅಕ್ಕಾ ಎಂದು-ನೇಮದೊಳು ಕರೆವಾತ।
ಅಮ್ಮನನ ಸಲೆಯುಪ್ಪಿ ಕೆಮ್ಮನೆ ಕೆಡುತಿಹ।
ತಿಮ್ಮಗೆಲ್ಲಿಯದೊ ಶಿವಯೋಗ ॥೧೬॥

ರೂಪೇಂದ್ರಿಯಂಗಳಿಗೆ-ತಾ ಪರಿದು ವಿಷಯದೊಳು।
ಆ ಪರಶಿವನ ನೆನೆಹ ಮನಕೆ ತಾರದ।
ಪಾಪಿಗೆಲ್ಲಿಯದೊ ಶಿವಯೋಗ ॥೧೭॥

ಕ್ರೂರವಿಷಯಗಳೆಂಬ-ವಾರುಧಿಯ ನಡುವಿರ್ದು



ಸಾರಶರಣರನು ಹಳಿದಾಡುತಿಹ ಸಂ।
ಸಾರಿಗೆಲ್ಲಿಯದೊ ಶಿವಯೋಗ ॥೧೮॥

ದೇಶದೇಶವ ತಿರುಗಿ-ಹೇಸದೆಲ್ಲರ ಬೇಡಿ।
ಕಾಸಗಂಟಿಕ್ಕಿ ತಾ ವಿರಕ್ತನು ಯೆಂಬ।
ಹೇಸಿಗೆಲ್ಲಿಯದೊ ಶಿವಯೋಗ ॥೧೯॥

ಎಲ್ಲಾ ಪುರಾತನರು-ಸೊಲ್ಲಿದವಚನಗಳೊಳು।
ಅಲ್ಲಿಗೊಂದೊಂದು ಕಲಿತೆಲ್ಲರ ಪಳಿವ।
ಪುಳುವಿಗೆಲ್ಲಿಯದೊ ಶಿವಯೋಗ ॥೨೦॥

ಮುಂದೆ ಶರಣು ಮಾಡಿ-ಹಿಂದಿರುಗಿ ನಿಂದಿಸಿಯರ।
ವಿಂದ ಸಖನ ತನುಜಗೆ ವಶವಾಗಿರುವ।
ಹಂದಿಗೆಲ್ಲಿಯದೊ ಶಿವಯೋಗ ॥೨೧॥

ಭೂತೇಶನವರುಗಳ-ಜಾತಿಸೂತಕವೆತ್ತಿ।
ಖ್ಯಾತಿಯಿಂ ನುಡಿದು ಕರ್ಪುಕೀಡಾಗುವ।
ಪಾತಕನಿಗುಂಟೆ ಶಿವಯೋಗ ॥೨೨॥

ಮೃಡನಿತ್ತ ದ್ರವ್ಯವನು-ಮೃಡಗರ್ಪಿಸದೆಕೊಂಡು।
ಒಡಲನನುಗಾಲ ಪೊರೆದು ಜೀವಿಸುತಿಹ।
ತುಡಗಗೆಲ್ಲಿಯದೊ ಶಿವಯೋಗ ॥೨೩॥

ತನು ಗುಣಂಗಳ ಕೆಡದೆ-ಮನಗುಣಂಗಳ ಬಿಡದೆ।
ಅನುಭಾವಿ ಎಂದು ಸರ್ವರೊಳು ಗುಸುರುವ।
ಬಿನುಗಗೆಲ್ಲಿಯದೊ ಶಿವಯೋಗ ॥೨೪॥

ಅಸಮ ಶ್ರೀಗುರುವಿನಾ-ಎಸೆವ ಕರದೊಳುಪುಟ್ಟಿ।
ವಸುಧಿಯೊಳು ಪಿತನ ಪೆಸರನ್ನು ಪೇಳುವ॥
ಹುಸಿಕಗೆಲ್ಲಿಯದೊ ಶಿವಯೋಗ ॥೨೫॥

ಕರಣಾದಿ ಗುಣಗಳನು-ಪರಿದು ಈಡಾಡದೆ।
ಚರಲಿಂಗವೆಂದು ಧರೆಯೊಳು ಚರಿಸುತಿಹ।
ದುರುಳಗೆಲ್ಲಿಯದೊ ಶಿವಯೋಗ ॥೨೬॥

ಹರನವಂಶಿಕರಾದ-ಚರಲಿಂಗಮೂರ್ತಿಗಳ।
ಪರಿತೋಷದಿಂದ ಶಿವನೆಂದು ನಂಬದ।
ಮರುಳಗೆಲ್ಲಿಯದೊ ಶಿವಯೋಗ ॥೨೭॥

ಮದಗಳೆಂಟರ ನೆಲೆಯ-ಹದವುಬತ್ತದೆ ನಾನೆ।
ಸದುಗುಣಿಯೆಂದು ಜಗದೊಳು ಸಲೆತಿರುಗುವ।
ಮದಡಗೆಲ್ಲಿಯದೊ ಶಿವಯೋಗ ॥೨೮॥

ಸಟೆಯನ್ನು ಬಳಸುತ್ತ-ದಿಟವನತಿಗಳೆವುತ್ತ।
ನಿಟಲಾಕ್ಷ ನಡಿಯ ನಂಬಿನಂಬದೆ ಬರಿಯ।
ಕುಟಿಲಗೆಲ್ಲಿಯದೊ ಶಿವಯೋಗ ॥೨೯॥

ಆಚಾರ ತಪ್ಪಿ ಮೇಲಾ-ಚಾರವನು ಪಿಡಿದು।
ನೀಚರಂದದೊಳು ಘಟವ ರಕ್ಷಿಸುತಿರ್ಪ।
ಕೂಚಗೆಲ್ಲಿಯದೊ ಶಿವಯೋಗ ॥೩೦॥

ಆಶೆಯು ಒಳಗಿರುತಿರಲು-ನಿರಾಶಕನಂದದೊಳು।
ವೇಷವನು ತಾಳಿಬಕನಂತೆ ಚರಿಸುವ।
ದೋಷಿಗೆಲ್ಲಿಯದೊ ಶಿವಯೋಗ ॥೩೧॥

ಕರಮನಂಗಳ ಮೇಲೆ-ಹರತಾನೆ ನೆಲಿಸಿರಲು।
ದೊರಕೊಳ್ಳದೆನಗೆ ಶಿವ ಕೃಪೆಯೆಂದೆಂಬ।
ಕುರುಬಗೆಲ್ಲಿಯದೊ ಶಿವಯೋಗ ॥೩೨॥

ಎಲ್ಲರೊಳಗೆ ಬಿನ್ನಹ-ವಿಲ್ಲದೊಲ್ಲೆನು ಎಂದು।
ಎಲ್ಲರ ತೊಲಗಿ ಮೆಲ್ಲನಾಗಿ ಬೇಡುವ।
ಖುಲ್ಲಗೆಲ್ಲಿಯದೊ ಶಿವಯೋಗ ॥೩೩॥

ಅಂಗಗುಣಗಳ ತಿಳಿದು-ಸಂಗವ ದೆಡೆಯಲ್ಲಿಹ।
ಲಿಂಗದಲಿ ಮನವ ನಿಲಿಸಿ ಸತ್ಯದೊಳಿರೆ।
ಹಿಂಗದಿಹುದು ಆ ಶಿವಯೋಗ ॥೩೪॥

ವಿದ್ಯೆಬುದ್ಧಿಗಳನ್ನು-ಪೊರ್ದಿಸಿದ ಗುರುವಿಗು
ಪದ್ರವನು ಮಾಡಿ ತನ್ನನೆ ಮೆರೆಯುತಿಹ ।
ಕ್ಷುದ್ರಗೆಲ್ಲಿಯದೊ ಶಿವಯೋಗ ॥೩೫॥

ಅಂದಿನಾ ಶರಣರಿಗೆ-ಇಂದಿನವರಾರು ಸರಿ।
ಎಂದು ಸಂತೋಷದಿಂದ ನಂಬದೆ ಇಹ।
ಮಂದಮತಿಗುಂಟೆ ಶಿವಯೋಗ ॥೩೬॥

ಅಂಗದವ ಗುಣವಿರುತ-ಲಿಂಗಕ್ಕೆ ಸಹಭೋಜ।
ನಂಗಳ ಮಾಡಿ ಲಿಂಗಾಂಗಿಯೆಂಬ ಭವ।

236
2711.
2711.



ಭಂಗಿಗೆಲ್ಲಿಯದೊ ಶಿವಯೋಗ ॥೩೭॥

ಕರುಣದಿಂ ಗುರುವಿತ್ತ-ಪರಮಲಿಂಗವ ಹೃದಯ।
ಸರಸಿಜದೊಳಗೆ ನೆಲೆಗೊಳಿಸಿ ನೆನೆಯಲು।
ದೊರೆಕೊಂಬುದವಗೆ ಶಿವಯೋಗ ॥೩೮॥

ಸತ್ತು ಚಿತ್ತಾನಂದವೆ-ಕರ್ತೃ ಶಿವಲಿಂಗವೆಂ।
ಬರ್ಥವ ತಿಳಿದು ಅರ್ಥಿಯಿಂದ ಜಪಿಸಲು।
ಹತ್ತಿ ಸಾರುವದು ಶಿವಯೋಗ ॥೩೯॥

ಆರಿಂದಲಾದೆನಾ-ನಾರಿಂದ ಬೆಳೆದೆ ನಾ।
ನಾರಿಂದಲೆನಗೆ ಐಕ್ಯವೆಂದರಿಯದ।
ಚೋರಗೆಲ್ಲಿಯದೊ ಶಿವಯೋಗ ॥೪೦॥

ಶರಿರವಾಸನೆಯೊಳಗೆ- ಧರೆ ಹೇಮ ಕಾಮಿನಿಯು।
ಸ್ಮರಿಸುತ್ತ ಮನದಿ ಪ್ರಣವಾಕ್ಷರವ ಮರೆವ।
ನರಕಿಗೆಲ್ಲಿಯದೊ ಶಿವಯೋಗ ॥೪೧॥

ತನುವ ಮಹ ಗುರುವಿಂಗೆ-ಮನವ ಘನಲಿಂಗಕ್ಕೆ।
ಮನಶುದ್ಧದಿಂದ ಧನವ ಜಂಗಮಕಿತ್ತ।
ಅನಘನಿಗೆ ಉಂಟು ಶಿವಯೋಗ ॥೪೨॥

ಅಂಗಲಿಂಗದ ಭೇದ-ದಿಂಗಿತವ ನೆರೆತಿಳಿದು।
ಮಾಂಗಲ್ಯನಾಗಿ ನಿರವಯದಿ ಮನನಿಂದ।
ಲಿಂಗೈಕ್ಯಗುಂಟು ಶಿವಯೋಗ ॥೪೩॥

ಜೀವಭಾವವ ತೊರೆದು-ದೇವರ ದೇವನನು।
ಸಾವಧಾನದೊಳ ಭಜಿಸುವ ಮಹಿಮನಿಗೆ।
ಆವಾಗಳುಂಟು ಶಿವಯೋಗ ॥೪೪॥

ಗುರು ಚನ್ನಬಸವೇಶ-ಚರಣಗಳ ಸಲೆ ನೆನೆವು।
ವರತ್ರಿವಿಡಿಯರ್ಥವ ಪೇಳಿ ಕೇಳ್ವರ।
ದೊರೆವುದಂತವರ್ಗೆ ಶಿವಯೋಗ ॥೪೫॥

**ಇಂತೀ ಶಿವಯೋಗಾಚರಣೆ ತ್ರಿವಿಡಿ**

**ಸಮಾಪ್ತ**

2711